

ಎಲ್ಲ ಆಯಾಮಗಳಲ್ಲಿ, ಪ್ರತ್ಯೇಕಿಸಲಾಗದಷ್ಟು ಒಂದಾಗಿ ಸೇರಿಕೊಂಡಿವೆ. 'ಜಲಸಂರಕ್ಷಣೆ', ಇಲ್ಲಿ ಅಂತರ್ಗತವಾದ ಸಹಜ ಜೀವನ ಪ್ರಕ್ರಿಯೆ...! ಅವರಿಗದು, ತಮ್ಮ ದೈನಂದಿನ ಚಟುವಟಿಕೆಗಳಲ್ಲಿನ ಸ್ವಾಭಾವಿಕ ಅಂಶ. ಹಾಗೆ ನೋಡಿದಲ್ಲಿ, 'ಪರಿಸರ ಜಾಗೃತಿ' 'ಜಲಸಂರಕ್ಷಣೆ' ಎನ್ನುವ ಮಾತುಗಳೇ ಇಲ್ಲಿ ತೀರಾ ಅಸಹಜ ಹಾಗೂ ಮೈಗೊಗ್ಗದ ಸಂಗತಿಗಳು. ಹಾಗಿರುವಾಗ, 'ಜಲಸಾಕ್ಷರತೆ' 'ಜಲಸಂರಕ್ಷಣೆ'ಯ ಕುರಿತಾದ ಆಂದೋಲನ ಇಲ್ಲಿ ಪರಕೀಯವೇ ಹೌದು...!

ಹಾಗೆಂದಲ್ಲಿ, 'ಜಲಕ್ಷಾಮ'ದ ವಿಷಯವೂ ರೈತರಿಂದ, ಹಳ್ಳಿಗರಿಂದ ದೂರವುಳಿದ, ಅನ್ವಯಿಸದ ವಿಷಯವೇ?! 'ಜಲಸಂರಕ್ಷಣೆ'ಯ ಅರಿವು, ಅನುಷ್ಠಾನದ ಆಂದೋಲನ ಇಲ್ಲಿ ಅನವಶ್ಯಕವೇ? ಖಂಡಿತವಾಗಿಯೂ ಇಲ್ಲವಲ್ಲ...! 'ಜಲಕ್ಷಾಮ'ದ ಭೀಕರತೆಯನ್ನು ಎಲ್ಲಕ್ಕಿಂತ ಮಿಗಿಲಾಗಿ ಅನುಭವಿಸುತ್ತಿರುವುದು, ಅದಕ್ಕೆ ಬಲಿಯಾಗುತ್ತಿರುವುದು ಕೂಡಾ ರೈತರೂ, ಹಳ್ಳಿಗರೇ ಎನ್ನುವುದು ಜ್ವಲಂತ ಸತ್ಯ . ಇದು ಇಲ್ಲರಿಗೂ ತಿಳಿದ ಸಂಗತಿಯೂ ಹೌದು. ಈ ವಿಷಯಗಳ ಪ್ರಸ್ತಾಪನೆಗೆ ಇಲ್ಲಿ ಕಾರಣವಿಷ್ಟೇ ... 'ಜಲಸಂರಕ್ಷಣೆ'ಯ ಯಾವ ಸಂಗತಿಯು ರೈತಾಪಿ ಜನರ, ಹಳ್ಳಿಗರ, 'ಸಹಜ ಜೀವನ ಧರ್ಮ'ವಾಗಿದೆಯೋ, ಅಥವಾ ಸಹಜ ಜೀವನ ಧರ್ಮವಾಗಬೇಕಾಗಿತ್ತೋ , ಅಲ್ಲಿ ಇಂದು,ಅಸ್ವಾಭಾವಿಕವಾಗಿ,

ಕಳೆದ ಶತಕಗಳ 'ವಸಾಹತು ಕು-ಪ್ರಜ್ಞೆ'ಯ ಕತ್ತಲಲ್ಲಿ ನಮ್ಮತನವೆಂದೋ ಕಳೆದುಹೋಗಿದೆ. ಆದರೆ ದುರಂತವೆಂಬಂತೆ, ಅದಕ್ಕೂ ಮಿಗಿಲಾಗಿ, ಸ್ವಾತಂತ್ರ್ಯೋತ್ತರ ಭಾರತದಲ್ಲಿ, ಈ ಹಿಂದಿನ ಎಲ್ಲ ವಸಾಹತುಗಾರರನ್ನು ನಾಚಿಸುವಂತೆ, ನಾವೇ ನಮ್ಮ ಮೇಲೆ, 'ನವವಸಾಹತ'ನ್ನು ಸ್ಥಾಪಿಸಿಕೊಂಡಿದ್ದೇವೆ...!

'ನಗರೀಕೃತ' ಮಾನಸಿಕತೆಯ 'ನವವಸಾಹತುಗಾರ'ರಾದ ನಾವುಗಳು, ನಮ್ಮವರೇ ಆದ ರೈತರು-ಹಳ್ಳಿಗರ ಮೇಲೆ 'ಪರಾವಲಂಬಿ'ಗಳಾಗಿದ್ದೇವೆ...!

ನಮ್ಮ ನಡುವಿನ ಕೆರೆ ಕೊಳ್ಳಗಳನ್ನೆಲ್ಲ ಕುರುಹಿಲ್ಲದಂತೆ ಅಳಿಸಿಹಾಕಿದ್ದಾಗಿದೆ. ಈಗ, ಅವರಿಂದ ತಮ್ಮ ಸಹಜ ಜೀವನಧರ್ಮವೆಂಬಂತೆ ಸುರಕ್ಷಣೆಗೊಂಡಿದ್ದ 'ಜಲಮೂಲ'ಗಳನ್ನೆಲ್ಲ ರಕ್ತವಾಗಿಸಿಕೊಂಡು ಹೀರಿ ಮೆರೆಯುತ್ತಿದ್ದೇವೆ...!

ನಮ್ಮ ಅಭಿವೃದ್ಧಿಯ ಕಳಶಗಳಾಗಿರುವ ನಮ್ಮ ಬೆಂಗಳೂರು, ಚೆನ್ನೈನಂತಹ ಮಹಾನಗರಗಳಿಂದ ಹಿಡಿದು ಸಣ್ಣ ಸಣ್ಣ ನಗರ-ಪಟ್ಟಣಗಳೂ, ತಮ್ಮ ದೈನಂದಿನ ಅವಶ್ಯಕತೆಗಳಿಗಾಗಿ ದೂರದೂರದ ನದಿ, ಕೊಳ್ಳಗಳಿಂದ ನೀರನ್ನು ಬರಿದು ಮಾಡುತ್ತಿವೆ. ಸ್ಥಳೀಯ ಹಳ್ಳಿಗರ ಸಹಮತಿ, ಹಿತವನ್ನು ಕಡೆಗಣಿಸಿ, ಕ್ಷುಲ್ಲಕಗೊಳಿಸಿ ನಾವು ಕೊಳ್ಳೆ ಹೊಡೆಯುತ್ತಿದ್ದೇವೆ. ಇದಕ್ಕೆ ಬದಲಾಗಿ, ಪರಿಸರ-ಪ್ರಕೃತಿಗೆ ತ್ಯಾಜ್ಯದ ವಿಷವುಣಿಸಿ, ಸರಿಪಡಿಸಲಾಗದ ಹಾನಿಯನ್ನುಂಟು ಮಾಡುತ್ತಿದ್ದೇವೆ. ಇದರ ಪರಿಣಾಮವೇ ಇಂದು ಲಕ್ಷಾಂತರ ರೈತಾಪಿ ಬಂಧುಗಳ ಆತ್ಮಹತ್ಯೆಯ ದಾರುಣತೆ, ಕೃಷಿಯ ದಯನೀಯ ಸ್ಥಿತಿ ಹಾಗೂ ಹಳ್ಳಿ ಜನಜೀವನದ ಅವ್ಯವಸ್ಥೆ. ಗ್ರಾಮ-ನಗರಗಳ ಸಂಘರ್ಷ, ಸಮಸ್ಯೆ - ಸವಾಲು - ಉತ್ತರಗಳ ಸಂಕೀರ್ಣತೆ...!

ಇಲ್ಲಿ ಉದ್ಭವಿಸಿರುವ ಮತ್ತೊಂದು ಪರಿಣಾಮವು ಇನ್ನೂ ಹೆಚ್ಚಿನ ಹಾನಿಯನ್ನುಂಟು ಮಾಡುತ್ತಿರುವುದು. ಅದು, 'ನಗರೀಕೃತ' ಮಾನಸಿಕತೆಯ ನಂಜು, ಇಂದು ಹಳ್ಳಿಗಳನ್ನೂ ಆವರಿಸುತ್ತಲಿರುವುದು, ಹಬ್ಬುತ್ತಲಿರುವುದು...! ಕೃಷಿಯ ಮೂಲಕ ಹಾಗೂ ಹಳ್ಳಿ ಪರಿಸರದಲ್ಲಿ ಸಹಜ ಜೀವನಕ್ರಮದ ಮೂಲಕ, ಜಲಮೂಲಗಳ ಸಹಜ ಸಂರಕ್ಷಣೆಯ ಮನೋಧರ್ಮದಿಂದ, ಹಳ್ಳಿಗರೂ ಇಂದು ಹೊರತಾಗುತ್ತಿರುವುದು ದೊಡ್ಡ ದುರಂತವೇ ಸರಿ...!

ಅಲ್ಲಿಯೂ ಇಂದು, ಕೃಷಿಯ ಜೀವನದ ವಾಣಿಜ್ಯೀಕರಣ, ವ್ಯಾಪಾರೀಕರಣ ಒಳಹೊಕ್ಕಿರುವುದು. ಇದು ಪರಿಸ್ಥಿತಿಯ ಅನಿವಾರ್ಯತೆಯೋ, ಅವರ ಅಸ್ತಿತ್ವದ ಅವಶ್ಯಕತೆಯೋ ತಿಳಿಯದು...! ಒಬ್ಬ ರೈತ ಮತ್ತೊಬ್ಬ ರೈತನ ಹಿತವನ್ನು ಗಮನದಲ್ಲಿಟ್ಟುಕೊಳ್ಳುತ್ತಿಲ್ಲ. ಅವನ ಪಾಲಿನ ನೀರಿನ ಜೊತೆ ಮತ್ತೊಬ್ಬ ಸಹರೈತನ ನೀರನ್ನು ಬಾಚಿಕೊಳ್ಳುವುದರಲ್ಲಿ ಸಂಕೋಚಪಡುತ್ತಿಲ್ಲ.